ಓ.ಎಸ್.97/2020 ಪಿ.ಡಬ್ಲು-2
ರಂಗಣ್ಣ ತಂದೆ ಅಮರಯ್ಯ

*ದಿ.20-06-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.*

ಮುಂದುವರೆದ ಪಾಟೀ ಸವಾಲು ಶ್ರೀ ಎಸ್.ಹೆಚ್.ಎಸ್ ವಕೀಲರಿಂದ :-

ವಾದಿ ನನ್ನ ಸಂಬಂಧಿಕನಲ್ಲ ಆದರೆ ನಮ್ಮ ಕುಲದವರು ಇರುತ್ತಾರೆ. ನಾನು ಮೇದಿನಾಪುರ ಗ್ರಾಮದವನಾಗಿರುತ್ತೇನೆ. ನಾನು ವಾದಿಯ ಸೋದರ ಮಾವನಾಗಬೇಕು ಎಂದರೆ ಸರಿಯಲ್ಲ. ಸಾಕ್ಷಿ ಮಾವ ಮಾತ್ರ ಆಗುತ್ತೇನೆ ಎನ್ನುತ್ತಾರೆ. ಯಾರ ಮೇಲೆ ವಾದಿ ಕೇಸು ಹಾಕಿರುತ್ತಾರೆ ನನಗೆ ಹೇಳಲು ಆಗುವದಿಲ್ಲ. ನನಗೆ ಓದಲು ಮತ್ತು ಬರೆಯಲು ಬರುವದಿಲ್ಲ. ನನ್ನ ಮುಖ್ಯ ವಿಚಾರಣೆ ಬರೆಯಲು ಯಾರು ಮಾಹಿತಿ ನೀಡಿರುತ್ತಾರೆ ನನಗೆ ಗೊತ್ತಿಲ್ಲ. ಸುಮಾರು 2 ವರ್ಷಗಳ ಹಿಂದೆ ಪ್ರತಿವಾದಿ ವಾದಿಯ ಮನೆಯಲ್ಲಿ ಬಾಡಿಗೆ ಇದ್ದ ವಿಚಾರ ನನಗೆ ಗೊತ್ತಾಗಿರುತ್ತದೆ. ತಿಂಗಳಿಗೆ ರೂ.5,000/- ರಂತೆ ಬಾಡಿಗೆ ನಿಗದಿಯಾಗಿತ್ತು. ಬಾಡಿಗೆ ಕೊಡುವಾಗ ನಾನು ಕೂಡ ಇದ್ದೆ. ಅವರು ಬಾಡಿಗೆ ಪತ್ರ ಬರೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಬಾಡಿಗೆ ನೀಡಿದ ಮನೆಯನ್ನು ನಾನು ನೋಡಿರುತ್ತೇನೆ. ಮನೆಯ ಚೆಕ್ಕಬಂದಿ ನನಗೆ ಹೇಳಲು ಆಗುವದಿಲ್ಲ. ಮನೆಯ ನಂ.42 ಇರುತ್ತದೆ. ಸದರಿ ಮನೆ ಆದೇಶ ರವರ ಹೆಸರಿನಲ್ಲಿ ಇತ್ತು. ಈಗ ವಾದಿಯ ಹೆಸರಿನಲ್ಲಿ ಇರಬಹುದು. ಬಾಡಿಗೆ ಮಾತುಕತೆ ಆದಾಗ ಆದೇಶ ಕೂಡ ಇದ್ದರು. ಆದೇಶ ರವರ ಹೆಸರಿನಲ್ಲಿ ಮನೆ ಇದ್ದಾಗ ಬಾಡಿಗೆ ನೀಡಿರುತ್ತಾರೆ ಎಂದರೆ ಸರಿ. ಆದೇಶರವರು ಯಾವಾಗ ಖರೀದಿ ಮಾಡಿಕೊಂಡಿರುತ್ತಾರೆ ಗೊತ್ತಿಲ್ಲ.

2. ಪ್ಲಾಟ್ ನಂ.42 ರ ಪುರಸಭೆ ಸಂಖ್ಯೆ 2-13-39-42/14 ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮನೆಯ ವಿಸ್ತೀರ್ಣ ಹೇಳಲು ನನಗೆ ಗೊತ್ತಿಲ್ಲ. ಆದೇಶರವರು 3 ತಿಂಗಳು ಬಾಡಿಗೆ ನೀಡಿದ್ದರು. ವಾದಿ ದಾಖಲೆ ಸೃಷ್ಟಿಸಿಕೊಂಡು ದಾವೆ ಹಾಕಿದ್ದು ಅವರಿಗೆ ಸಹಾಯ ಮಾಡಲು ನಾನು ಯಾವುದೇ ವಿಷಯ ಗೊತ್ತಿರದೆ ಇದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ನಮ್ಮ ಕುಲದವನಾಗಿದ್ದರಿಂದ ನಾನು ಸಾಕ್ಷಿ ಹೇಳಲು ಬಂದಿರುತ್ತೇನೆ ಎಂದರೆ ಸರಿ. ಪ್ರತಿವಾದಿ ವಾದಿಯ ಮನೆಯಲ್ಲಿ ಬಾಡಿಗೆ ಇರದೇ ಇದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)*

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.